ತಾಲ್ಲೂಕು ಮಟ್ಟದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ಕಛೇರಿಯನ್ನು ತೆರೆಯುವ ಬಗ್ಗೆ

210 (1918) : **ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು)** : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ತಾಲ್ಲೂಕು ಮಟ್ಟದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ;

(ಆ) ಹಾಗಿದ್ದಲ್ಲಿ, ಇದನ್ನು ಎಂದಿನಿಂದ ಆರಂಭಿಸಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಹೌದು

(ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ (ಹಂಪನಗೌಡ ಬಾದರ್ಲಿಯವರ ಪರವಾಗಿ) : ತಾಲ್ಲೂಕು ಮಟ್ಟದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ ಎಂದರೆ 'ಹೌದು' ಎಂದಿದ್ದಾರೆ. ಹಾಗಿದ್ದಲ್ಲಿ, ಇದನ್ನು ಎಂದಿನಿಂದ ಆರಂಭಿಸಲಾಗುವುದು ಎಂದರೆ 'ಸರ್ಕಾರದ ಪರಿಶೀಲನೆಯಲ್ಲಿದೆ' ಎಂದಿದ್ದಾರೆ. ಅಧಿಕಾರ ವಿಕೇಂದ್ರೀಕರಣದ ನಂತರ ಜಿಲ್ಲಾ ಮಟ್ಟದಲ್ಲಿದ್ದಂಥ ಕೆಲವು ಯೋಜನೆಗಳು ತಾಲ್ಲೂಕು ಮಟ್ಟದಲ್ಲಿ ಬಂದಿರುತ್ತವೆ. ತಾಲ್ಲೂಕು ಮಟ್ಟದಲ್ಲಿ ಕೆಲಸ ಸರಿಯಾಗಿ ಆಗುತ್ತಿಲ್ಲ. ಅಲ್ಲಿರತಕ್ಕಂಥ ಒಬ್ಬ ತನಿಖಾ ಸಹಾಯಕರಿಂದ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳನ್ನು ನೋಡುವುದು ಮತ್ತು ಇನ್ನಿತರ ಕಾರ್ಯಕ್ರಮಗಳಾದ ಗಂಗಾ ಕಲ್ಯಾಣ ಯೋಜನೆ ಮುಂತಾದವುಗಳನ್ನು ನೋಡಲು ಸಾಧ್ಯವಾಗದೇ ಇರುವುದರಿಂದ ಮತ್ತು ಅಲ್ಲಿರತಕ್ಕಂಥ ಎಕ್ಸಿಕ್ಯುಟಿವ್ ಆಫೀಸರ್ ಕೂಡ ಈ ಕಡೆ ಸರಿಯಾಗಿ ಗಮನಹರಿಸದೇ ಇರುವುದರಿಂದ ಈ ಇಲಾಖೆಯಲ್ಲಿ ಬರತಕ್ಕಂಥ ಅಭಿವೃದ್ಧಿ ಕೆಲಸಗಳು ಬಹಳಷ್ಟು ಕುಂಠಿತವಾಗಿವೆ. ಈ ಹಾಸ್ಟೆಲ್‌ಗಳಲ್ಲಿರುವ ಮಕ್ಕಳಿಗೆ ಆಹಾರ ವಿತರಣೆಯಾಗಲೀ ಮತ್ತು ಸ್ಕಾಲರ್‌ಷಿಪ್ ವಿತರಣೆಯಾಗಲೀ ಸರಿಯಾಗಿ ಆಗದೇ ಅವರು ಬಹಳಷ್ಟು ತೊಂದರೆಯನ್ನು ಅನುಭವಿಸತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ 2-3 ತಿಂಗಳ ಹಿಂದೆ ಮಾನ್ಯ ಸಚಿವರು, ಈ ಇಲಾಖೆಯನ್ನು ಬೇರ್ಪಡಿಸಿ ತಾಲ್ಲೂಕು ವಲಯದಲ್ಲಿ ಒಂದು ಕಛೇರಿಯನ್ನು ಪ್ರಾರಂಭ ಮಾಡುತ್ತೇವೆ ಎಂದು ಒಂದು ಸಭೆಯಲ್ಲಿ ಹೇಳಿದ್ದನ್ನು ನಾನು ಪತ್ರಿಕೆಯಲ್ಲಿ ಓದಿದ್ದೆ. ಆದರೆ ಇದುವರೆಗೂ ಅದು ಕಾರ್ಯಗತವಾಗಿಲ್ಲ. ಮಾನ್ಯ ಮಂತ್ರಿಗಳು ದಯವಿಟ್ಟು ಈ ಕೂಡಲೇ ಅದನ್ನು ಮಾಡಲು ಆದೇಶ ಕೊಡಬೇಕು. ಅಲ್ಲದೆ, ತಾಲ್ಲೂಕುಗಳಲ್ಲಿ ವಿದ್ಯಾರ್ಥಿಗಳಿಗೆ ತಲಾ 75 ರೂಪಾಯಿಗಳ ಸ್ಕಾಲರ್‌ಶಿಪ್ ವಿತರಣೆ ಮಾಡತಕ್ಕಂಥ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಬಿಲ್ ತಯಾರು ಮಾಡಿ, ಅದನ್ನು ಜಿಲ್ಲಾ ಮಟ್ಟಕ್ಕೆ ಕಳುಹಿಸಿ ಮೇಲುರುಜು ಮಾಡಿಸಿ ನಂತರ ಹಣವನ್ನು ವಿತರಣೆ ಮಾಡತಕ್ಕಂಥ ಒಂದು ಸಂದರ್ಭವನ್ನು ಮಾನ್ಯ ಸಚಿವರು

ದಿನಾಂಕ 19-2-2000 ದಂದು ಒಂದು ಆದೇಶದಲ್ಲಿ ತಿಳಿಸಿದ್ದಾರೆ. ಆದ ಕಾರಣ, ತಾಲ್ಲೂಕು ಮಟ್ಟದಲ್ಲಿ ಹಣವನ್ನು ವಿತರಿಸಲು ಅನುಕೂಲವಾಗುವಂತೆ, ಮೇಲುರುಜು ಮಾಡಿಸುವ ವ್ಯವಸ್ಥೆಯನ್ನು ತೆಗೆದು ಹಾಕುವಂಥ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವ ಸಲಹೆಯನ್ನು ನಾನು ಮಾನ್ಯ ಮಂತ್ರಿಗಳಿಗೆ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಒಬ್ಬ ಹಿಂದುಳಿದ ವರ್ಗದ ಇನ್ಸ್‌ಪೆಕ್ಟರ್ ಮಾತ್ರ ಇದ್ದಾರೆ, ಬೇರೆ ಅಧಿಕಾರಿಗಳು ಇಲ್ಲ. ಅಲ್ಲಿ ಅಧಿಕಾರಿಗಳು ಇರಬೇಕಾದಂಥ ಅಗತ್ಯ ಇದೆ ಮತ್ತು ಒಂದು ಹಿಂದುಳಿದ ವರ್ಗದ ಕಛೇರಿಯೂ ಬೇಕಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಹೇಗಿದೆಯೋ ಅದೇ ರೀತಿ ರೂಪಿಸುವ ಅಗತ್ಯವನ್ನು ನಾವು ಮನಗಂಡು ಈ ಬಗ್ಗೆ ಒಂದು ಪೂರ್ವಭಾವಿ ಸಿದ್ಧತೆಯನ್ನು ಮಾಡಿ ಹಣಕಾಸಿನ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಅಲ್ಲಿ ಅದು ಮುಕ್ತಿ ಪಡೆದರೆ ಖಂಡಿತವಾಗಿ ನಾವು ಅದನ್ನು ಮಾಡುತ್ತೇವೆ. ಒಟ್ಟಿನಲ್ಲಿ ನಾನೂ ಕೂಡ ಇದರ ಬಗ್ಗೆ ತುಂಬಾ ಆಸಕ್ತಿ ವಹಿಸಿದ್ದೇನೆ. ಮಾನ್ಯ ಸದಸ್ಯರ ನಿರೀಕ್ಷೆ ಪ್ರಕಾರ ಆಗುತ್ತದೆ ಎನ್ನುವ ವಿಶ್ವಾಸ ಕೂಡ ನನಗೆ ಇದೆ. ಇನ್ನು ವಿದ್ಯಾರ್ಥಿ ವೇತನ ಹಂಚಿಕೆ ಮಾಡುವ ವಿಚಾರ ಹೇಳಿದರು. ಅದು ನನ್ನ ಗಮನಕ್ಕೆ ಬಂದಿದೆ. ಹಿಂದೆ ಇದ್ದುದನ್ನು ತಪ್ಪಿಸಿ ತಾಲ್ಲೂಕು ಮಟ್ಟದಲ್ಲಿ ವಿತರಣೆ ಮಾಡಲು ಬೇಕಾದಂಥ ವ್ಯವಸ್ಥೆ ಮಾಡಿದ್ದೇನೆ. ಅದರಲ್ಲಿ ಮೇಲುಸಹಿಗೆ ಹೋಗಬೇಕು ಎಂದು ಇದೆ. ಅದನ್ನು ತಿದ್ದುಪಡಿ ಮಾಡಿ ಮುಂದಿನ ವರ್ಷ ಸಲೀಸಾಗಿ ಸಿಗುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೇ, ಬಿ. ಸಿ. ಎಂ. ಮತ್ತು ಮೈನಾರಿಟಿ ವರ್ಗಗಳ ಜನರಿಗೆ ಬಹಳ ಅನ್ಯಾಯವಾಗುತ್ತಿದೆ. ತಾಲ್ಲೂಕು ಮಟ್ಟದ ಕಛೇರಿಗಳನ್ನು ಯಾವಾಗ ತೆರೆಯುತ್ತೀರಿ ಎಂದು ಅವರು ನಿರ್ದಿಷ್ಟವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಸರ್ಕಾರದವರು ಪರಿಶೀಲನೆಯಲ್ಲಿ ಇದೆ ಎಂದು ಹೇಳಿದರೆ ಅದು ಸಾಕಾಗುವುದಿಲ್ಲ. ಕರಾರುವಕ್ಕಾಗಿ, ಆರು ತಿಂಗಳಲ್ಲೋ, ಮೂರು ತಿಂಗಳಲ್ಲೋ ಪ್ರಾರಂಭ ಮಾಡುತ್ತೇವೆ ಎನ್ನುವ ಭರವಸೆಯನ್ನು ಸದನಕ್ಕೆ ಕೊಡಬೇಕಾಗುತ್ತದೆ. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯಲ್ಲಿ ನಾನೂ ಸದಸ್ಯನಾಗಿರುವುದರಿಂದ ಹೇಳುತ್ತಿದ್ದೇನೆ, ಅವರಿಗೆ ಬರಬೇಕಾದಂಥ ಸವಲತ್ತುಗಳು ಆ ವರ್ಗಕ್ಕೆ ತಲುಪತಕ್ಕಂಥಾದ್ದರಲ್ಲಿ ಬಹಳ ಅನ್ಯಾಯವಾಗಿದೆ. ಆದ್ದರಿಂದ ತುರ್ತಾಗಿ ಅದರ ಅವಶ್ಯಕತೆ ಇದೆ ಎನ್ನುವುದು ನನ್ನ ಅಭಿಪ್ರಾಯ.

11.20 ಎ ಎಂ

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಇರುವಷ್ಟು ಕಳಕಳಿ ನನಗೂ ಇದೆ. ಇದು ಆಗಲೇಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ. ನಮ್ಮ ಎಲ್ಲಾ ಪ್ರಸ್ತಾವನೆಗಳಿಗೆ ಹಣಕಾಸಿನ ಬಗ್ಗೆ ಮಂಜೂರಾತಿ ಸಿಗಬೇಕಾಗುತ್ತದೆ. ಇದು ತಮಗೂ ಗೊತ್ತಿದೆ. ಅದು ಸಿಗದೆ ಓಪನ್ ಮಾಡುವುದಕ್ಕೆ ಆಗುವುದಿಲ್ಲ. ಈ ಸದನದಲ್ಲಿ ತಾವೆಲ್ಲ ಏನು ಒತ್ತಾಯ ಮಾಡುತ್ತಿದ್ದೀರಿ ನಾನೂ ಕೂಡ ಈ ಪ್ರಸ್ತಾವನೆಗೆ ಬದ್ಧನಾಗಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಹೇಳುವುದೇನೆಂದರೆ ಇದು ಬಡವರಿಗಾಗಿ ಆಗುವಂಥ ಕೆಲಸ. ಹಣಕಾಸು ಇಲಾಖೆ ಅವರ ಸರ್ಕಾರದಿಂದ ಹೊರತಾಗಿ ಇದೆಯೇ? ಹೇಗೆ? ಹಣಕಾಸು ಇಲಾಖೆ ಅವರ ಸರಕಾರದ ಒಂದು ಅಂಗ ಅಲ್ಲವೇ? ಮಾನ್ಯ ಮಂತ್ರಿಗಳು ಹೇಳುವುದು ನೋಡಿದರೆ ಬೇರೆ ಯಾವುದೋ ಸರ್ಕಾರದಿಂದ ತರಬೇಕೇನೋ ಎನ್ನುವ ಹಾಗೆ ಹೇಳುತ್ತಿದ್ದಾರೆ. ಆದ್ದರಿಂದ ಹಣಕಾಸಿನ ಇಲಾಖೆಯಿಂದ ಮಂಜೂರಾತಿಯನ್ನು ಪಡೆದು ಬಹಳ ಬೇಗನೆ ತರುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಹಣಕಾಸಿನ ಇಲಾಖೆಯಿಂದ ಮಂಜೂರಾತಿ ಪಡೆಯುವುದು ಒಂದು ಸಿಸ್ಟಮ್ ಆಗಿರುತ್ತದೆ. ಆದಷ್ಟು ಬೇಗ ನಾವು ಮಾಡುತ್ತೇವೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 14ನೇ ಪಟ್ಟಿಯಲ್ಲಿರುವ 63 ಪ್ರಶ್ನೆಗಳ ಪೈಕಿ 50 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ನಗರ ಸಭೆ ಮತ್ತು ಪುರಸಭೆ ವ್ಯಾಪ್ತಿಯ ನಗರ ಮತ್ತು ಪಟ್ಟಣಗಳ ರಸ್ತೆ ದುರಸ್ತಿ.

1569 (2237) : ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿನ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ ರಸ್ತೆ ಸುಧಾರಿಸಲು ಸರ್ಕಾರವು ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಬಿವೃದ್ಧಿ ಸಚಿವರು) :

(ಅ) ಬಂದಿದೆ

(ಆ) ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿ ಅವುಗಳದೇ ಆಗಿರುತ್ತದೆ. ಆದಾಗ್ಯೂ ರಾಜ್ಯದಲ್ಲಿನ ಮುನಿಸಿಪಾಲಿಟಿಗಳ ಇಂದಿನ ಅತೃಪ್ತಿಕರ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ರಾಜ್ಯ ಸರ್ಕಾರವು ಹಣಕಾಸು ಸಂಸ್ಥೆಗಳಿಂದ ಸಂಪನ್ಮೂಲಗಳನ್ನು ಪಡೆಯಲು ಉದ್ದೇಶಿಸಿದೆ. ಹುಡ್ಕೋ ಸಂಸ್ಥೆಯಿಂದ ರೂ. 100-00 ಕೋಟಿಗಳ ಸಾಲವನ್ನು ರಾಜ್ಯ ಸರ್ಕಾರವು ಪಡೆಯಲು ಉದ್ದೇಶಿಸಿದ್ದು ಸದರಿ ಹಣವನ್ನು ಮುನಿಸಿಪಾಲಿಟಿಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳಾದ